KARNATAKA SHEEP AND SHEEP PRODUCTS (AMENDMENT) BILL, 1978.

Introduction

SRI DEVENDRAPPA GHALAPPA (Minister for Animal Husbandry and Dairy Development) I beg to move :—

"That leave be granted to introduce the Karnataka Sheep and Sheep Products (Amendment) Bill, 1978."

ಶ್ರೀ ಸಿ. ಎಂ. ಇಬ್ರಾಹಿಂ.—ಈ ಬಿಲ್ಲನ್ನು ಮಂಡಿಸುವುದಕ್ಕೆ ಮುಂಚೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದು ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿರುತ್ತದೆ. ಕುರಿಗಳನ್ನು ತೆಗೆದುಕೊಂಡು ಬಂದು ಕತ್ತರಿಸಬೇಕು ಎನ್ನುವ ಬಗ್ಗೆ ಬಿಲ್ ಪಾಸ್ ಮಾಡಬೇಕು ಎಂದು ಹೇಳುತ್ತಿದ್ದಾರೆ, ಇದಕ್ಕೆ ಒಂದು ವಿವರಣೆ ಕೊಟ್ಟು ಬಿಲ್ ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗಾಗಲೇ ಬಿಲ್ ಮಂಡಿಸಿದ್ದಾಗಿದೆ.

The question is :

"That leave be granted to introduce the Karnataka Sheep and Sheep Products (Amendment) Bill, 1978."

The motion was adopted and leave was granted

SRI DEVENDRAPPA GHALAPPA.—I beg to introduce the Karnataka Sheep and Sheep Products (Amendment) Bill, 1978.

MR. SPEAKER.—The Bill is introduced. **

We will now take up : the next item in the agenda.

10-00 A.M.

BUDGET ESTIMATES FOR THE YEAR 1978-79. GENERAL DISCUSSION—(Debate Continued)

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಈ ಮನೆಯಲ್ಲಿ ಚರ್ಚೆ ನಡೆಯುತ್ತಿದೆ. ಸಾಮಾನ್ಯವಾಗಿ ನಾವು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಸಂಬಂಧಪಟ್ಟಂತಹ ಮಂತ್ರಿಗಳು ಮುಖ್ಯವಾದ ಯಾವುದಾದರೂ ಕೆಲಸ ಇದ್ದರೆ ಅವರು ಇಲ್ಲದೆ ಇರಬಹುದು. ನಿನ್ನೆ ಮಾನ್ಯ ಆರ್ಥ ಮಂತ್ರಿಗಳು ಹೇಳಿದ್ದರು ಆದಷ್ಟು ಹೆಚ್ಚು ಮಂತ್ರಿಗಳು ಸಭೆಯಲ್ಲಿ ಹಾಜರಿರುತ್ತಾರೆಂದು.

ಶ್ರೀ ಎಸ್. ಎಂ. ಯಾಹ್ಯಾ.—ಎಲ್ಲರೂ ಇದ್ದಾರಲ್ಲಾ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ರಾಜ್ಯದ ಜನತೆಯು ಮೇಲೆ ಕಳೆದ ೬ ವರ್ಷಗಳಲ್ಲಿ ೮೦ ಕೋಟಿ ರೂಪಾಯಿಗಳ ತೆರಿಗೆಯ ಹೊರೆಯನ್ನು ಹಾಕಿದ್ದೀರಿ. ಜನತೆ ಆದನ್ನು ಕೊಡುತ್ತಿದ್ದಾರೆ ಸರ್ಕಾರದ ಪ್ರತಿಯೊಂದು ದೊಡ್ಡ ದೊಡ್ಡ ಯೋಜನೆಗಳಲ್ಲಿ ಹಣ ಅವಶ್ಯಯವಾಗಿದೆ. ಕೋಟ್ಯಾಂತರ ರೂಪಾಯಿಗಳ ಅವಶ್ಯಕತೆ ಇದೆ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಖಾತೆಗಳಲ್ಲಿ ಅಗಾಧವಾದ ಕೋಟ್ಯಾಂತರ ರೂಪಾಯಿಗಳು ಅವಶ್ಯಯ ಆಗಿದೆ. ಇವತ್ತು ಹೆಚ್ಚಾಗಿ ಮುಖ್ಯ ಮಂತ್ರಿಗಳ

** Copy appended as Annexure to this Volume.